# ಅಭಿಣಜ ಖಧಿಣಜಟ ಎಟಿ ಖಟಿಜುಚಿಟಿ

ಋುತಚಿ೦೦ಚಿ ಛಿ
ಖಜಛಿಣಕಾಡಿಜಡಿ
೦ಭಭಿ ಮುಚಿಟಿ ಆಜರಡಿಜಜ ಅ೦ಟಟಜರ೦ಜ ಜಿ೦ಡಿ ಘಾ೦ಟಜಟಿ






# "ಭಾರತೀಯ ಜಾತಿ ವ್ಯವಸ್ಥೆ"

ಭಾರತೀಯ ಜಾತಿ ವ್ಯವಸ್ಥೆಯು ಸಾಮಾಜಿಕ ಶ್ರೇಣಿಕರಣವನ್ನು ವಿವರಿಸುತ್ತದೆ. ಭಾರತದ ಜಾತಿ ವ್ಯವಸ್ಥೆಯು ಅತ್ಯಂತ ಉಗ್ರವಾದ ಟೀಕೆಗಳಿಗೆ ಹಾಗೂ ವಿರೋಧಗಳಿಗೆ ಕಾರಣವಾಗಿದೆ. ಜಾತಿಯು ಒಂದು ನಿರ್ಬಂಧಿತ ಸಮೂಹವಾಗಿದೆ, ಒಬ್ಬ ಮನುಷ್ಯ ತಾನು ಯಾವ ಜಾತಿಗೆ ಸೇರಿದವನು ಎನ್ನುವುದು ಅವನ ಜನನದ ಮೊದಲೇ ನಿರ್ಧರಿತವಾದಂತಹ ಒಂದು ವ್ಯವಸ್ಥೆಯಾಗಿದೆ. ಇದರಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ, ಈ ಜಾತಿ ವ್ಯವಸ್ಥೆಯಲ್ಲಿ ನಾವು ಸಾವಿರಾರು ಉಪ ಜಾತಿಗಳು, ಪಂಗಡಗಳು, ವಂಶವಾಹಿಳ ಸಮೂಹಗಳು ಹಾಗೂ ಗೋತ್ರ ವ್ಯವಸ್ಥೆಗಳನ್ನು ಕಾಣಬಹುದಾಗಿದೆ.

ಕೇವಲ ಈ ಜಾತಿವ್ಯವಸ್ಥೆ ಅಥವಾ ವರ್ಣ ವ್ಯವಸ್ಥೆ ಎನ್ನುವುದು ಕೆವಲ ಹಿಂದೂ ಧರ್ಮಕ್ಕೆ ಮಾತ್ರವೆ ಸೀಮಿತವಾಗಿಲ್ಲ ಬದಲಾಗಿ ಮುಸ್ಲಿಂ, ಕ್ರಿಶ್ಚಿಯನ್ ಇತರೆ ಎಲ್ಲಾ ಧರ್ಮಗಳಳಲ್ಲಿಯೂ ಸಹ ಕಾಣಬಹುದಾಗಿದೆ. ಭಾರತದಲ್ಲಿ ಸುಮಾರು 50% ರಿಂದ 60% ಜನಸಂಖ್ಯೆಯು ಗ್ರಾಮೀಣಪ್ರದೇಶಗಳಲ್ಲಿ ವಾಸಿಸುತ್ತಿದ್ದು ಈ ಭಾಗಗಳಲ್ಲಿ ಪ್ರಸ್ತುತ ಇಂದಿನವರೆವಿಗೂ ಈ ಜಾತಿವ್ಯವಸ್ಥೆ ಚಾಲ್ತಿಯಲ್ಲಿ ಇರುವುದನ್ನು ಕಾಣಬಹುದಾಗಿದೆ. ಈ ವ್ಯವಸ್ಥೆಯು ಮುಂದುವರೆಯಲು ಬಹುಮುಖ್ಯ ಪಾತ್ರ ರಾಜಕೀಯ ವ್ಯವಸ್ಥೆ ಎಂದರೆ ತಪ್ಪಿಲ್ಲ.

**ಇತಿಹಾಸ**

ಅತ್ಯಂತ ಸಂಕೀರ್ಣಮಯವಾದ ಜಾತಿವ್ಯವಸ್ಥೆಯು ಹೇಗೆ ಹುಟ್ಟಿಬಂದಿತು ಎಂಬುದನ್ನು ಖಚಿತವಾಗಿ ಹೇಳುವುದು ಬಹಳ ಕಷ್ಟ. ಯಾವುದೇ ನಿರ್ಧಿಷ್ಟ ಜಾಡನ್ನು ಹಿಡಿದು ಜಾತಿಯು ಹೇಗೆ ಉತ್ಪನ್ನವಾಯಿತು ಎಂದು ನಿಕರವಾಗಿ ಹೇಳುವುದಂತು ಬಹಳ ಕಷ್ಟ, ಆದರೆ ಬಾರತೀಯ ಜಾತಿ ವರ್ಗಕರಣವು ಪ್ರಾಚೀನ ಇರಾನಿನ ವರ್ಗಿಕರಣವನ್ನು ಹೋಲುತ್ತದೆ. ಅದರೆ ಬ್ರಾಹ್ಮಣವರ್ಗವು ಅರ್ಚಕರಾದರೆ, ಕ್ಷತಿಯ ವರ್ಗವು ದೇಶಸೇವೆಯಂತಹ ಯೋಧರು, ವೈಶ್ಯರು ವ್ಯಾಪಾರ ಕೇತ್ರವನ್ನು ಆಯ್ಕೆಮಾಡಿಕೊಂಡಿರುತ್ತಾರೆ ಹಾಗೂ ಇತರೆ ಸೇವಾವಲಯಕ್ಕೆ ಹಿಂದುಳಿದ ಹಾಗೂ ದಲಿತ ಸಮೂದಾಯಕ್ಕೆ ಸೇರಿದ ಕ್ಷುದ್ರವರ್ಗವನ್ನು ಆಯ್ಕೆಮಾಡಿರುತ್ತಾರೆ.

**ವರ್ಣ ಮತ್ತು ಜಾತಿ**

ಪ್ರಾಚೀನ ಹಿಂದು ಗ್ರಂಥಗಳ ಪ್ರಕಾರ ನಾಲ್ಕು ವರ್ಣಗಳಿವೆ. ಭಗವಗ್ದೀತೆಯು ಪ್ರಕಾರ ವರ್ಣವ್ಯವಸ್ಥೆಯನ್ನು ಗುಣ ಮತ್ತು ಕರ್ಮದ ಆಧಾರದ ಮೇಲೆ ನಿರ್ಧರಿಸಲಾಗಿದೆ. ಮನುಸ್ಮೃತಿಯಲ್ಲಿ ನಾಲ್ಕು ವರ್ಣಗಳನ್ನು ಉಲ್ಲೇಖಿಸಲಾಗಿದೆ ಬ್ರಾಹ್ಮಣ, ಕ್ಷತ್ರಯ, ವೈಶ್ಯ, ಶೂದ್ರ, ಪ್ರಾಚೀನ ಹಿಂದೂ ಗ್ರಂಥಗಳಲ್ಲಿ ಸೂಚಿಸಿರುವಂತೆ ಈ ಜಾತಿ ಪದ್ದತಿಯು ವರ್ಣಪದ್ದತಿಯಲ್ಲಿಯೇ ತನ್ನ ಬೇರುಗಳನ್ನು ಕಂಡಿಕೊಂಡಿದೆ. ಪ್ರಸ್ತುತ ಒಂದೊಂದು ಜಾತಿಗೆ ಒಂದೂದು ದೇವಾರಾಧನೆ, ಸಂಘಟಣೆ, ಹೋರಾಟ ಇತ್ಯಾಧಿಗಳು ಹುಟ್ಟಿಕೊಂಡಿವೆ. ಆದರೆ ವೇಧಗಳಲ್ಲಿ ಜಾತಿ ವ್ಯಸ್ಥೆಗೆ ಅಷ್ಟೋಂದು ಮಹತ್ವವನ್ನು ನೀಡಿರಲಿಲ್ಲ, ಆದರೆ ಪುರುಷ ಸೂಕ್ತದಲ್ಲಿ ಸಾವಿರಾರು ಅಸಂಖ್ಯಾತ ಶ್ಲೋಕಗಳಲ್ಲಿ ಒಂದೇ ಒಂದು ಸಾರಿ ಪ್ರಸ್ತಾಪಿಸಲಾಗಿದೆ. ಹಲವಾರು ವಿದ್ವಾಂಸರು ಈ ಜಾತಿ/ವರ್ಣವ್ಯವಸ್ಥೆಯ ಪ್ರಸ್ತಾಪವು ಉಪವಿಷಯವಾಗಿದೆ ಎಂದು ತಿಳಿಸಿದ್ದಾರೆ. ಡಾ.ಬಿ.ಆರ್.ಅಂಬೇಡ್ಕರ್ ಅವರೂ ಕೂಡ ಈ ವಿಷಯದಲ್ಲಿ ವಿವರವಾದ ಅಧ್ಯಯನ ಮಾಡಿದ ಬಳಿಕ ಜಾತಿ ಮತ್ತು ವರ್ಣವ್ಯವಸ್ಥೆಯು ಮಧ್ಯದಲ್ಲಿ ಸೇರಿಸಲಾಗಿದೆ ಎಂಬ ಅಭಿಪ್ರಾಯಕ್ಕೆ ಬಂದಿರುತ್ತಾರೆ. ವೇದಗಳ ಕಾಲದಲ್ಲಿ ಯಾವುದೇ ಜಾತಿ, ಧರ್ಮ, ವರ್ಣದ ಆಧಾರದ ಮೇಲೆ ಯಾರಿಗೂ ನಿಷೇಧವಿರಲಿಲ್ಲ, ಶೂದ್ರರನ್ನೂ ಒಳಗೊಂಡಂತೆ ಎಲ್ಲರಿಗೂ ವೇದಗಳನ್ನು ಕೇಳಲು ಹಾಗೂ ಧಾರ್ಮಿಕ ಆಚರಣೆಯಲ್ಲಿ ಭಾಗವಹಿಸಲು ಅವಕಾಶಗಳನ್ನು ನೀಡುತ್ತಿದ್ದರು ಯಾವುದೇ ವಿಷೇದ ವಿರಲಿಲ್ಲ.

**ಜಾತಿ ಮತ್ತು ಸಾಮಾಜೀಕ ಸ್ಥಾನಮಾನ**

ಸಾಂಪ್ರದಾಯಿಕವಾಗಿ ರಾಜಕೀಯ ಆಧಿಕಾರವು ಕ್ಷತ್ರಿಯರ ಕೈಯಲ್ಲಿತ್ತು, ಆದರೆ ಅದರ ರಕ್ಷಕವಚವನ್ನು ಬ್ರಾಹ್ಮಣ ವರ್ಗದವರು ಹಿಡಿತದಲ್ಲಿಟ್ಟುಕೊಂಡಿರುತ್ತಾರೆ, ಬ್ರಾಹ್ಮಣವರ್ಗವು ಧರ್ಮವನ್ನು ಅಥೈಸುವಕಾರ್ಯ ವೃತ್ತಿಯಿಂದ ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆದುಕೊಂಡಿರುತ್ತಾರೆ.

ಜಾತಿ ಪದ್ಧತಿಯು ವೃತ್ತಿಪರತೆಯ ಮೇಲೆ ನಿರ್ಧಾರವಾಗಲಾರದು ಅಥವಾ ಸಾಮಾಝಿಕ ಗುಂಪಿನ ಸ್ಥಾನಮಾನವನ್ನು ಪಡೆಯಲಾಗದು, ಬ್ರಿಟಿಷರು ಮೊದಲು ಭಾರತದಲ್ಲಿ ನಮ್ಮ ಒಗಟ್ಟನು ವಿಭಜನೆಮಾಡಲು ಮೋದಲಭಾರಿಗೆ ಜಾತಿ ಆಧಾರದ ಮೇಲೆ ಜನಗಣತಿಯನ್ನು ಪ್ರಾರಂಭಿಸಿ ತಮ್ಮ ಆಡಳಿತ ಆನುಕೂಲಕ್ಕೆ ತಕ್ಕಂತೆ ಒಂದು ಸಂಹಿತೆಯನ್ನು ಮಾಡಿಕೊಂಡರು. ಹರಿಜನರು ಅಥವಾ ಜಾತಿ ಪದ್ಧತಿಯಿಂದ ಹೊರಗಿದ್ದ ಜನರು ಸಮಾಜದಲ್ಲಿ ಅತ್ಯಂತ ಕೀಳು ದರ್ಜೆಯನ್ನು ಪಡೆದಿದ್ದರು. ಆರಂಭದಲ್ಲಿ ಹರಿಜನರನ್ನು ಅಶ್ಪೃಶ್ಯರು ಎಂದು ಕೆಲವರು ಉಲ್ಲೇಖಿಸುತ್ತಿದ್ದರು. ಈ ಹಿಂದೆ ಹರಿಜನರು ಸಾಂಆಝಿಕ ವಿಭಜನೆ ಮತ್ತು ನಿರ್ಭಂದಗಳಿಂದ ಬಹಳಷ್ಟು ತೊಂದರೆ ಅನುಭವಿಸಿದರು, ಇದರೊಂದಿಗೆ ಒಂದು ಕಡೆ ಬಡತನ ಅವರಿಗೆ ಶತ್ರುವಾಗಿ ಪರಿಣಮಿಸಿತ್ತು, ಅವರಿಗೆ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶವನ್ನು ನಿರ್ಭಂಧಿಸಿದ್ದರು, ಅವರು ದೇವಾಲಯಗಳಿಗೆ ಪ್ರವೇಶವಿರಲಿಲ್ಲ, ಶುದ್ಧಕುಡಿಯುವ ನೀರು ಸಹ ಸಿಗುತ್ತಿರಲಿಲ್ಲ ಹಾಗೂ ಮೇಲ್ಜಾತೀಯ ಕಲೋನಿಗಳಲ್ಲಿ ಪ್ರವೇಶಿಸಿದರೆ ಅವರಿಗೆ ಅತ್ಯಂತ ಕಠಿಣ ರೀತಿಯ ಶಿಕ್ಷೆಯನ್ನು ನೀಡುತ್ತಿದ್ದರು.

**ಜಾತಿ ಪದ್ಧತಿಯ ಆಧುನಿಕ ಸ್ಥಾನಮಾನಗಳು**

ಭಾರತವು ಅಧಿಕ ಜನಸಂಖ್ಯೆಯನ್ನು ಅವಲಂಭಿಸಿರುವುದು ಗ್ರಾಮೀಣ ಪ್ರದೇಶದಲ್ಲಿ, ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಸಣ್ಣಪುಟ್ಟ ಪಟ್ಟಣಗಳಲ್ಲಿ ಜಾತಿ ಪದ್ಧತಿಯೂ ಇನ್ನೂ ಸಹ ಪ್ರಬಲವಾಗಿ ಬೇರೂರಿದೆ. ಭಾರತದ ರಾಜಕಾರಣದಲ್ಲಿ ಜಾತಿಯು ಪ್ರಮುಖ ಅಂಶವಾಗಿ ಮಾರ್ಪಟ್ಟಿದೆ, ಭಾರತ ಸರ್ಕಾರವು ಜಾತಿ ಮತ್ತು ಉಪಜಾತಿಗಳನ್ನು ಅಧಿಕೃತವಾಗಿ ದಾಖಲಿಸಿ ಅದರ ಮೂಲಕ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದ ವರೆವಿಗೂ ಹಾಗೂ ಉದ್ಯೋಗಗಳಲ್ಲಿ ಮೀಸಲಾತಿ ನೀಡಲು ಧನಾತ್ಮಕ ತಾರತಮ್ಯ ಮಾಡಿ ವಿಭಜನೆ ಮಾಡಿ ಪರಿಶಿಷ್ಟ, ಪರಿಶಿಷ್ಟ ಪಂಗಡ ಮತ್ತು ಇನ್ನಿತರ ಹಿಂದುಳಿದ ವರ್ಗಗಳೆಂದು ಗುರ್ತಿಸಿದೆ.

**ಪರಿಶಿಷ್ಟ ಜಾತಿಗಳು** : ಬಹುತೇಕವಾಗಿ ಅಸ್ಪೃಶ್ಯರನ್ನು ಒಳಗೊಂಡಿದೆ, ಸದ್ಯದ 2011ರ ಭಾರತದ ಜನಸಂಖ್ಯೆಯಲ್ಲಿ 16.6% ಜನಸಂಖ್ಯೆನ್ನು ಹೊಂದಿದೆ, ಹಾಗೂ ಕರ್ನಾಟಕದಲ್ಲಿ 17.15% ಹೊಂದಿದೆ.

**ಪರಿಶಿಷ್ಟ ಪಂಗಡಗಳು** ಸಾಮಾನ್ಯವಾಗಿ ಬುಡಕಟ್ಟು ಜನಾಂಗವನ್ನು ಹೊಂದಿದೆ ಸದಯ ಬಾರತದ ಜನಸಂಖ್ಯೆಯಲ್ಲಿ ಒಟ್ಟು 8.6% ಹೊಂದಿದೆ, ಕರ್ನಾಟಕದಲ್ಲಿ 6.95% ಹೊಂದಿದೆ.

**ಇತರೆ ಹಿಂದುಳಿದ ವರ್ಗಗಳು** : ಮಂಡಲ್ ಆಯೋಗದ ಅಥವಾ ಸಾಂಆಝಿಕ ಮತ್ತು ಶೈಕ್ಷಣಿಕ ಹಿಂದುಳಿದ ವರ್ಗಗಳ ಆಯೋಗವನ್ನು ಬಾರತದ ಸಾಮಾಜಿಕವಾಗಿ ಅಥವಾ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸುವ ಆದೇಶದೊಂದಿಗೆ ಪ್ರಧಾನಮಂತ್ರಿ ಮೂರಾರ್ಜಿ ದೇಶಾಯಿ ನೇತೃತ್ವದ ಜನತಾ ಪಕ್ಷದ ಸರ್ಕಾರವು 1979ರಲ್ಲಿ ಮಂಢಲ್ ಆಯೋಗವನ್ನು ಸ್ಥಾಪಿಸಿದರು. ಈ ಆಯೋಗವು ಜಾತಿ ತಾರತಮ್ಯವನ್ನು ಪರಿಹರಿಸಲು ಜನರಿಗೆ ಮೀಸಲಾತಿಯ ಪ್ರಶ್ನೆಯನ್ನು ಪರಿಗಣಿಸಲು ಹಾಗೂ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು 11 ಸಾಂಮಾಜಿಕ, ಆರ್ಥಿಕ ಶೈಕ್ಷಣಿಕ ಸೂಚಕಗಳನ್ನು ಬಳಸಿದರು. 1980ರಲ್ಲಿ ಇತರ ಹಿಂದುಳಿದ ವರ್ಗಗಳು ಜಾತಿ, ಸಾಮಾಜಿಕ, ಆರ್ಥಿಕ ಸೂಚಕಗಳ ಆಧಾರದಮೇಲೆ ಗುರುತಸಲ್ಪಟ್ಟ ಭಾರತದ ಜನಸಂಖ್ಯೆಯ 52% ಇರುವ ಅದರ ತಾರ್ಕಿಕತೆಯ ಆದಾರದಮೇಲೆ ಆಯೋಗದ ವರಧಿಯು ಇತರ ಹಿಂದುಳಿದ ವರ್ಗಗಳ ಸದಸ್ಯರಿಗೆ ನೀಡಬೇಕೆಂದು ಶಿಫಾರಸ್ಸು ಮಾಡಿತು. ಯಾವುದೇ ಸರ್ಕಾರಿ ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಅಡಿಯಲ್ಲಿ 27% ಉದ್ಯೋಗಿಗಳಿಗೆ ಮೀಸಲಾತಿಗಳು, ಎಸ್.ಸಿ, ಎಸ್.ಟಿ ಮತ್ತು ಇತರೆ ಹಿಂದುಳಿದವರ್ಗಗಳಿಗೆ ಒಟ್ಟು ಮೀಸಲಾತಿಗಳ ಸಂಖ್ಯೆಯನ್ನು 49%ಕ್ಕೆ ತುಲುಪಿಸಿತು. ಪ್ರಸ್ತುತ ಈ ಮೀಸಲಾತಿ ಪ್ರಮಾಣವನ್ನು ರಾಜಕೀಯ ಪಕ್ಷಗಳು ತಮ್ಮ ಸ್ವರ್ಥಸಾಧನೆಗಾಗಿ ಮೀಸಲಾತಿ ಪ್ರಮಾಣವನ್ನು ಶೇಕಡ 50ಕ್ಕಿಂತ ಹೆಚ್ಚು ಮಾಡಿ ಇತರೆ ವರ್ಗಗಗಳ ಜನರಿಗೆ ಅನ್ಯಾಯವನ್ನು ಮಾಡುತ್ತಾ ಬರುತ್ತಿದ್ದಾರೆ.

ಭಾರತದ ಸಂವಿದಾನ 1950ರಲ್ಲಿ ಜಾರಿಯಾಗಿದ್ದರೂಅದು ಜಾತಿ ಪದ್ಧತಿಯನ್ನು ರದ್ದುಪಡಿಸುವಂತೆ ಸೂಚಿಸದರೂ ಇನ್ನೂ ಅಸ್ಪೃಶ್ಯತೆ ದಕ್ಷಿಣ ಏಷ್ಯಾದಲ್ಲಿ ಆಚರಣೆಯಲ್ಲಿದೆ, ಹಿಂದೂ ಸಂಸ್ಕೃತಿಯಲ್ಲಿ ಜಾತಿ ಪದ್ದತಿ ಅದರಲ್ಲೂ ಗ್ರಾಮೀಣ ಬಾರತದಲ್ಲಿ

ಆಳವಾಗಿ ಬೇರೂರಿದೆ, ಬಾರತದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಇಂದೂ ಸಹ ಸಂಪೂರ್ಣವಾಗಿ ಜಾತಿ ಆಧಾರದಮೇಲೆ ವಿಭಜಿಸಲ್ಪಟ್ಟಿವೆ. ಭಾರತದ ಒಟ್ಟು ಜನಸಂಖ್ಯೆ ಶೇಕಡಾ 16% ಜನರು ದಲಿತ ಸಮೂದಾಯದವರಾಗಿದುಸಿಂದಿಗೂ ಗ್ರಾಮೀಣ ಭಾಗಗಳಲ್ಲಿ ಬಹಿಷ್ಕಾರ, ತೆಜೋವದೆ ತಾರತಮ್ಯಗಳನ್ನು ಹೆದುರಿಸುತ್ತಿದ್ದಾರೆ, ಇಂದಿಗೂ ಸಹ ಒಬ್ಬ ದಲಿತನ ನೆರಲು ಮೇಲ್ಜಾತಿಯವರ ಮೇಲೆ ಬಿಳಬಾರದು, ಅವರು ದೇವಸ್ಥಾನಗಳಿಗೆ ಪ್ರವೇಸುವಂತಿಲ್ಲ, ಶಾಲೆಗಳಲ್ಲಿ ದಲಿತರ ಮಕ್ಕಳು ಹಿಂದನಸಾಲಿನಲ್ಲಿ ಕುಳಿತು ಪಾಠ ಪ್ರವಚನಗಳನ್ನು ಕೇಳುವಂತಹ ಪರಿಸ್ಥಿ ಇದೆ. ಆದುದ್ದರಿಂದ ಈ ಜಾತಿ ವ್ಯವಸ್ಥೆಯನ್ನು ಬುಡಸಮೇತ ಕಿತ್ತೊಗೆದರೆ ಮಾತ್ರವೇ ಸಾಮಾಜದಲ್ಲಿ ಜಾತಿ ತಾರತಮ್ಯವಿಲ್ಲದೆ ಪ್ರತಿಯೋಬ್ಬರು ಸಮಾನತೆಯಿಂದ ಜೀವನ ನಡೆಸಲು ಸಾಧ್ಯವಾಗುತ್ತದೆ.

**ಟಿಪ್ಪಣಿಗಳು:–**

1. ಭಾರತೀಯ ಸಮಾಜ – ಚ.ನ.ಚಂಕರ್‌ರಾವ್
2. Races and Cultures of India, - Dr. D.N Majumdar
3. 2011 census - Govt of India
4. Online Source.